ಅರಣ್ಯ ಸಂರಕ್ಷಣಾಧಿಕಾಯವರ ಕಛೇರಿ
(ಪ್ರಾದೇಶಿಕ), ಬೆಂಗಳೂರು
Office of the Conservator of Forests,
(Territorial) Bengaluru
ದೂರವಾಣಿ-080-23344686

ಜಾರಕಬಂಡೆ ಕಾವಲ್, ಕಮ್ಮಗೊಂಡನಹಳ್ಳಿ,
ಜಾಲಹಳ್ಳಿ ಪಶ್ಚಿಮ ಬೆಂಗಳೂರು-560015
Jarakabande Kaval, Kammagondanahalli ,
Jalahalli West, Bengaluru-560015
E-mail: cfbangalore.hg@gmail.com

ಸಂಖ್ಯೆ:/ಎ11/ಭೂಮಿ/ಸಿಆರ್-65/2023-24 ದಿನಾಂಕ: 23-07-2024
KFDBNGCOA11(LAND)/83/2024

**ಇವರಿಗೆ**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
(ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ),
ಅರಣ್ಯ ಭವನ, ಬೆಂಗಳೂರು

**ಮಾನ್ಯರೆ**

ವಿಷಯ: Diversion of 18.6 Ha land Sy No. 124 of Akkupete village, Kasaba Hobi, Devanahalli taluk, Bengaluru rural district for construction of Maintenance depot of Bangalore suburban Rail project road in favour of **Rail Infrastructure Development company (Karnataka) Limited (KRIDE), Samparka Soudha, Dr. Rajkumar road, Rajajinagar 1st** block Bengaluru-560010 in proposal # FP /KA/RAIL/142190/2021

ಉಲ್ಲೇಖ::
1. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ; ಎಫ್‌ಒಆರ್/ಸಿಆರ್/04/2021-22, ದಿನಾಂಕ 10.03.2022
2. ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ರವರ ಕಛೇರಿ ಪತ್ರ ಸಂಖ್ಯೆ: ಎ4/ಉಅಸಂ/ಕೆಆರ್‌ಐಡಿಇ/ಸಿಆರ್-08/2022-23 ದಿನಾಂಕ; 15-02-2024
3. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ವಿಭಾಗ, ಕೋಲಾರ ರವರ ಪತ್ರ ಸಂಖ್ಯೆ:ಎ7/ಕಾಂಪಾ/ಸಿಎ/20/2024-25/131, ದಿನಾಂಕ 01.07.2024
4. ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ರವರ ಕಛೇರಿ ಪತ್ರ ಸಂಖ್ಯೆ: ಎ4/ಉಅಸಂ/ಕೆಆರ್‌ಐಡಿಇ/ಸಿಆರ್-08/2022-23 ದಿನಾಂಕ; 15-07-2024

*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Rail Infrastructure Development Company (Karnataka) Limited (KRIDE) ಸಂಸ್ಥೆಯವರು, ಅವರ FP /KA /RAIL /142190/2021 ರ ಪ್ರಸ್ತಾವನೆಯಲ್ಲಿ ರೈಲ್ವೆ ಡಿಪೋ ಸ್ಥಾಪಿಸಲು, ಬೆಂಗಳೂರು ಗ್ರಾಮಾಂತರ

ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಅಕ್ಕುಪೇಟೆ ರಾಜ್ಯ ಅರಣ್ಯ ಪ್ರದೇಶದ ಅಕ್ಕುಪೇಟೆ ಸರ್ವೆ ನಂಬರ್ 124 ರಲ್ಲಿ 18.6 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯ ತಿರುವಳಿಗೊಳಿಸಲು ಕೋರಿದ್ದು, ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು, ಸದರಿ ಮೇಲ್ಕಂಡ ಪ್ರಸ್ತಾವನೆಯಲ್ಲಿ ಅರಣ್ಯ ತಿರುವಳಿಗೊಳ್ಳಬೇಕಾಗಿರುವ ಅರಣ್ಯ ಪ್ರದೇಶಕ್ಕೆ ಬದಲಾಗಿ ದೊಡ್ಡಬಳ್ಳಾಪುರ ತಾಲ್ಲೂಕು, ಸಾಸಲು ಹೋಬಳಿ, ಸಾಸಲು ಗ್ರಾಮ ಸರ್ವೆ ನಂಬರ್ 65 ರಲ್ಲಿ 18.6 ಹೆಕ್ಟೇರ್ (46 ಎಕರೆ) ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಉಲ್ಲೇಖಿತ ಪತ್ರ (1) ರಂತೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಹಸ್ತಾಂತರಿಸಿದ್ದು, ಜಿಲ್ಲಾಧಿಕಾರಿಗಳು ಹಸ್ತಾಂತರಿಸಿರುವ ಸದರಿ ಪ್ರದೇಶವು ಇಳಿಜಾರಾಗಿದ್ದು, ಕಲ್ಲುಬಂಡೆಗಳಿಂದ ಕೂಡಿದ್ದು, ಹಾಗೂ 9600 ಮರಗಳಿಂದ ಕೂಡಿದ್ದು; ಪರಿಹಾರಾತ್ಮಕ ನೆಡುತೋಪು ಬೆಳೆಸಲು ಸೂಕ್ತವಾಗಿಲ್ಲದಿದ್ದ ಕಾರಣ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಹೊಸ ನಿಯಮಗಳಂತೆ 18.6 ಹೆಕ್ಟೇರ್ ಅರಣ್ಯ ಪ್ರದೇಶವು ಅರಣ್ಯ ತಿರುವಳಿಗೊಂಡರೆ, 37.2 ಹೆಕ್ಟೇರ್ ಡಿ-ಗ್ರೇಡೆಡ್ ಅರಣ್ಯ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳಸಬೇಕಾಗಿರುತ್ತದೆ. ಆದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಸದರಿ ಪರಿಹಾರಾತ್ಮಕ ನೆಡುತೋಪು ಬೆಳಸಲು ಸ್ಥಳ ಲಭ್ಯವಿಲ್ಲದ ಕಾರಣ ಬೆಂಗಳೂರು ನಗರ, ಕೋಲಾರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಅವರ ವಿಭಾಗ ವ್ಯಾಪ್ತಿಯಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು 37.2 ಹೆಕ್ಟೇರ್ (92 ಎಕರೆ) ಪ್ರದೇಶವು ಲಭ್ಯವಿದ್ದರೆ; ಸದರಿ ಅರಣ್ಯ ಪ್ರದೇಶದ ದಾಖಲಾತಿಗಳನ್ನು ಉಲ್ಲೇಖಿತ ಪತ್ರ (2) ರಂತೆ ಉಲ್ಲೇಖಿಸಿರುವಂತೆ, ಸಲ್ಲಿಸುವಂತೆ ಕೋರಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ವಿಭಾಗ, ಕೋಲಾರ ರವರು ಶ್ರೀನಿವಾಸಪುರ ವಲಯದ ಅಡ್ಡಗಲ್ ರಾಜ್ಯ ಅರಣ್ಯಕ್ಕೆ ಸೇರಿರುವ ದಿಗುವಮರಂಪಲ್ಲಿ ಸರ್ವೆ ನಂಬರ್ 70 ಮತ್ತು ತಿಮ್ಮನಹಳ್ಳಿ ಸರ್ವೆ ನಂಬರ್ 73 ರಲ್ಲಿ ಡಿ-ಗ್ರೇಡೆಡ್ ಅರಣ್ಯ ಪ್ರದೇಶವನ್ನು ಗುರುತಿಸಿ, Geo-referenced Map, Survey of India Toposheet with GPS co-ordinates, Suitability certificate (Format-B), CA Scheme with watering charges ಮತ್ತು Kml ದಾಖಲಾತಿಗಳನ್ನು 07 (ಏಳು) ಮೂಲ ಪ್ರತಿಗಳನ್ನು ಸಲ್ಲಿಸಿದ್ದು, ಆದರಂತೆ, Geo-referenced Map, Survey of India Toposheet with GPS co-ordinates, Suitability certificate (Format-B), CA Scheme with watering charges ಮತ್ತು Kml ದಾಖಲಾತಿಗಳ 06 (ಆರು) ಮೂಲ ಪ್ರತಿಗಳನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಉಲ್ಲೇಖ(4) ರ ಪತ್ರದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ, ರವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಆದ್ದರಿಂದ ಉಲ್ಲೇಖ(4)ರ ಪತ್ರದ ಪ್ರತಿ ಹಾಗೂ ಸದರಿ ಪತ್ರದೊಂದಿಗಿನ Geo-referenced Map, Survey of India Toposheet with GPS co-ordinates, Suitability certificate (Format-B), CA Scheme with watering charges ಮತ್ತು Kml ದಾಖಲಾತಿಗಳ 05 (ಐದು) ಮೂಲ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಮಾನ್ಯರ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ

ಪರಿಶೀಲಿಸಲಾಗಿದೆ
ದಿನಾಂಕ 26.7.24

Signed by
Sivasankar Sengottuvel
Date: 25-07-2024 11:42:33

ಅರಣ್ಯ ಸಂರಕ್ಷಣಾಧಿಕಾರಿ
(ಪ್ರಾದೇಶಿಕ), ಬೆಂಗಳೂರು